1219 ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣ ಪಟ್ಟಣದಲ್ಲಿ ನಿರ್ವಹಿಸುತ್ತಿರುವ ಕೃಷಿ ಇಲಾಖೆಯ ಕಛೇರಿಗಳು ಯಾವುವು; ಈ ಪೈಕಿ ಎಷ್ಟು ಕಛೇರಿಗಳು ಸ್ವಂತ ಕಟ್ಟಡದಲ್ಲಿವೆ ಹಾಗೂ ಎಷ್ಟು ಕಛೇರಿಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ;

ಆ) ಇಲ್ಲಿರುವ ಕೃಷಿ ಸಹಾಯಕ ನಿರ್ದೇಶಕರ ಕಛೇರಿಯು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವುದು ನಿಜವೇ;

ಇ) ಹಾಗಿದ್ದಲ್ಲಿ, ಇದಕ್ಕೆ ಸ್ವಂತ ಕಟ್ಟಡವನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಈ) ಇದ್ದಲ್ಲಿ, ಯಾವಾಗ ನಿರ್ಮಿಸಲಾಗುವುದು; ಇದರ ಅಂದಾಜು ವೆಚ್ಚವೆಷ್ಟು; ಪ್ರಸಕ್ತ ಸಾಲಿನಲ್ಲಿ ಇದಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಲಾಗುವುದು?

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು)

ಅ) 1) ಸಹಾಯಕ ಕೃಷಿ ನಿರ್ದೇಶಕರ ಕಛೇರಿ

2) ರೈತ ಸಂಪರ್ಕ ಕೇಂದ್ರ.

ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಹಳೆ ತಹಸೀಲ್ದಾರ್ ಕಛೇರಿ ಕಟ್ಟಡದಲ್ಲಿ, ಕಾರ್ಯನಿರ್ವಹಿಸುತ್ತಿದೆ. ಬಸವಕಲ್ಯಾಣದ ರೈತ ಸಂಪರ್ಕ ಕೇಂದ್ರವು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಆ) ಇಲ್ಲ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

1191 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಡಿಸಿಸಿ ಬ್ಯಾಂಕಿನಿಂದ ಹನುಮಾನ್ ಖಂಡಸಾರಿ ಮತ್ತು ಸಾಯಿ ಖಂಡಸಾರಿ ಸಕ್ಕರೆ ಘಟಕಗಳಿಗೆ ನೀಡಲಾದ ಸಾಲವೆಷ್ಟು; ಯಾವಾಗ ನೀಡಲಾಯಿತು? (ಮಾಲೀಕರ ವಿವರ ನೀಡುವುದು);

ಆ) ಸಾಲ ನೀಡುವ ಸಂದರ್ಭದಲ್ಲಿ ಬ್ಯಾಂಕಿನ ನಿಯಮಗಳ ಪ್ರಕಾರ ಎಷ್ಟು ಮೊತ್ತದ ಚರ ಮತ್ತು ಸ್ಥಿರಾಸ್ತಿಗಳನ್ನು ಪೂರಕ ಭದ್ರತೆಯಾಗಿ (ಕೊಲ್ಯಾಟರಲ್ ಸೆಕ್ಯುರಿಟಿ) ಪಡೆಯಲಾಗಿದೆ

ಇ) ಹಾಗಿದ್ದಲ್ಲಿ, ಚರ ಮತ್ತು ಸ್ಥಿರ ಆಸ್ತಿಗಳ ಮೊತ್ತವೆಷ್ಟು; (ಆಸ್ತಿಗಳ ಪೂರ್ಣ ವಿವರಗಳನ್ನು ಮಾರುಕಟ್ಟೆ ಮೌಲ್ಯದೊಂದಿಗೆ ನೀಡುವುದು) ;

ಈ) ಭದ್ರತೆಗಾಗಿ ಯಂತ್ರೋಪಕರಣಗಳನ್ನು ಮತ್ತು ಘಟಕವನ್ನು ಬ್ಯಾಂಕಿಗೆ ಅಡಮಾನ ಮಾಡಲಾಗಿದೆಯೇ;

ಉ) ಮೇಲ್ಕಂಡ ಎರಡು ಸಕ್ಕರೆ ಘಟಕಗಳಿಗೆ ನೀಡಲಾದ ಸಾಲದ ಮೊತ್ತದ ಪೈಕಿ ಈವರೆಗೆ ವಸೂಲಾದ ಅಸಲು ಮತ್ತು ಬಡ್ಡಿಯ ಮೊತ್ತವೆಷ್ಟು;

ಊ) ಆ ಪೈಕಿ ಬಾಕಿ ಇರುವ ಒಟ್ಟು ಸಾಲದ ಮೊತ್ತ ಎಷ್ಟು;

ಋ) ಸಾಲ ಮರು ಪಾವತಿಯಾಗದೆ ಸುಸ್ತಿ (ಎನ್‌ಪಿಎ) ಆಗಿದ್ದಲ್ಲಿ, ಅದರ ಮೊತ್ತವೆಷ್ಟು; ಸದರಿ ಘಟಕಗಳು ಈಗ ಕಾರ್ಯನಿರ್ವಹಿಸುತ್ತಿವೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು;

ಎ) ಸಕ್ಕರೆ ಘಟಕಗಳು ದಿವಾಳಿಯಾಗಿರುವುದೆಂದು ಬ್ಯಾಂಕಿಗೆ ಭದ್ರತೆಗಾಗಿ ಬ್ಯಾಂಕಿಗೆ ಅಡಮಾನ ಮಾಡಲಾಗಿದ್ದ ಯಂತ್ರೋಪಕರಣಗಳನ್ನು ಘಟಕದ ಮಾಲೀಕರು ಬ್ಯಾಂಕಿನ ಅಪ್ಪಣೆ ಇಲ್ಲದೇ ಮಾರಾಟ ಮಾಡುವ ಮೂಲಕ ಬ್ಯಾಂಕಿಗೆ ವಂಚನೆ ಮಾಡಿರುವುದು ನಿಜವೇ?

ಏ) ಹಾಗಿದ್ದಲ್ಲಿ, ಇವರ ಮೇಲೆ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಲಾಗಿದೆಯೇ; ಇಂತಹ ಬೇನಾಮಿ ಘಟಕಗಳಿಗೆ ಸಾಲ ನೀಡಲು ಕಾರಣರಾದ ಅಧಿಕಾರಿಗಳ ವಿರುದ್ಧ ತೆಗೆದುಕೊಂಡ ಕ್ರಮಗಳೇನು? ಸಾಲ ವಸೂಲಾತಿಗೆ ಸರ್ಕಾರದ ಕ್ರಮಗಳೇನು;

ಐ) ಒಂದು ವೇಳೆ ಈ ಸಾಲದ ಪ್ರಕರಣವನ್ನು ಓ.ಟಿ.ಎಸ್.ನಲ್ಲಿ ಮುಕ್ತಾಯಗೊಳಿಸಲು ನಿಯಮಗಳಲ್ಲಿ ಅವಕಾಶವಿದೆಯೇ;

ಒ) ಇಲ್ಲದಿದ್ದಲ್ಲಿ, ಸರ್ಕಾರದ ಪೂರ್ವಾನುಮತಿಯನ್ನು ಪಡೆಯ ಲಾಗಿದೆಯೇ?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು)

ಅ) ಬೀದರ್ ಡಿಸಿಸಿ ಬ್ಯಾಂಕಿನಿಂದ 2 ಸಕ್ಕರೆ ಘಟಕಗಳಿಗೆ ಸಾಲ ನೀಡಿರುವ ವಿವರ:

1. ಜೈ ಹನುಮಾನ್ ಖಂಡಸಾರಿ, ಕೊಡಂಬಲ, ಹುಮನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ ಈ ಸಕ್ಕರೆ ಘಟಕಕ್ಕೆ ದಿನಾಂಕ 31–10–2002ರಂದು ರೂ. 135.00 ಲಕ್ಷ ಸಾಲ ಮಂಜೂರಾಗಿದ್ದು ಈ ಪೈಕಿ ರೂ. 40.00

ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಮಾಲೀಕರ ಹೆಸರು ಶ್ರೀ ರಾಮಗೋಪಾಲ ತಂದೆ ಕನ್ನಯ್ಯಲಾಲ ಮಾಲು, ಗುಲ್ಬರ್ಗಾ.

2. ಸಾಯಿ ಖಂಡಸಾರಿ, ಕೊಡಂಬಲ, ಹುಮನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ, ಈ ಸಕ್ಕರೆ ಘಟಕಕ್ಕೆ ದಿನಾಂಕ 20–12–2002ರಂದು ರೂ.185.00 ಲಕ್ಷ ಸಾಲ ನೀಡಲಾಗಿರುತ್ತದೆ. ಮಾಲೀಕರ ಹೆಸರು ಶ್ರೀ ಡಿ.ಕೆ. ಸಿದ್ರಾಮ, ಕೆ.ಹೆಚ್. ಕಾಲೋನಿ, ಬೀದರ್.

ಆ) ಸಾಲ ನೀಡುವ ಸಂದರ್ಭದಲ್ಲಿ ಬ್ಯಾಂಕಿನ ನಿಯಮಗಳ ಪ್ರಕಾರ ಜೈ ಹನುಮಾನ್ ಖಂಡಸಾರಿ ಘಟಕಕ್ಕೆ ರೂ. 250.00 ಲಕ್ಷ ಹಾಗೂ ಸಾಯಿ ಖಂಡಸಾರಿ ಘಟಕಕ್ಕೆ ರೂ. 223.80 ಲಕ್ಷ ಮೌಲ್ಯದ ಚರ ಮತ್ತು ಸ್ಥಿರಾಸ್ತಿಯನ್ನು ಪೂರಕ ಭದ್ರತೆಯಾಗಿ ಪಡೆಯಲಾಗಿರುತ್ತದೆ.

ಇ) 1. ಜೈ ಹನುಮಾನ್ ಖಂಡಸಾರಿಯ ಚರ ಮತ್ತು ಸ್ಥಿರ ಆಸ್ತಿಗಳ ಮೌಲ್ಯದ ಮೊತ್ತ

ಎ)	ಜಮೀನು	ರೂ. 1387500.00
ಬಿ)	ಕಟ್ಟಡ	ರೂ. 13911800.00
ಸಿ)	ಮೆಶಿನರಿ ಮತ್ತು ಸಾಮಗ್ರಿ	ರೂ. 9500000.00
	ಒಟ್ಟು	ರೂ. 24799300.00

2. ಸಾಯಿ ಖಂಡಸಾರಿ ಚರ ಮತ್ತು ಸ್ಥಿರ ಆಸ್ತಿಗಳ ಮೌಲ್ಯದ ಮೊತ್ತ

ಎ)	ಜಮೀನು	ರೂ. 150000000
ಬಿ)	ಕಟ್ಟಡ	ರೂ. 7680000.00
ಸಿ)	ಮೆಶಿನರಿ ಮತ್ತು ಸಾಮಗ್ರಿ	ರೂ. 13200000.00
	ಒಟ್ಟು	**ರೂ. 22380000.00**

ಈ) ಮಾಡಲಾಗಿದೆ.

ಉ) 1. ಜೈ ಹನುಮಾನ್ ಖಂಡಸಾರಿ ಘಟಕಕ್ಕೆ ಒಟ್ಟು ನೀಡಲಾದ ಸಾಲ ರೂ. 40.00 ಲಕ್ಷದಲ್ಲಿ ಅಸಲು ರೂ. 22.47 ಲಕ್ಷ ಬಡ್ಡಿ ರೂ. 1.01 ಲಕ್ಷ ವಸೂಲಿ ಆಗಿರುತ್ತದೆ.

2. ಸಾಯಿ ಖಂಡಸಾರಿ ಘಟಕಕ್ಕೆ ನೀಡಲಾದ ಸಾಲ ರೂ. 185.00 ಲಕ್ಷದಲ್ಲಿ ರೂ. 45.76 ಲಕ್ಷ ವಸೂಲಿಯಾಗಿರುತ್ತದೆ.

ಊ) ಜೈ ಹನುಮಾನ್ ಖಂಡಸಾರಿ ಘಟಕದಿಂದ ರೂ. 17.32 ಲಕ್ಷ ಹಾಗೂ ಸಾಯಿ ಖಂಡ ಸಾರಿ ಘಟಕದಿಂದ ರೂ. 139.24 ಲಕ್ಷ ಬಾಕಿ ಇರುತ್ತದೆ.

ಋ) ಸುಸ್ತಿಯಾದ (ಎನ್‌ಪಿಎ) ಮೊತ್ತ ರೂ. 157.04 ಲಕ್ಷವಾಗಿರುತ್ತದೆ ಹಾಗೂ ಸದರಿ ಘಟಕಗಳು ನಷ್ಟದಲ್ಲಿರುವ ಕಾರಣ ಈಗ ಕಾರ್ಯನಿರ್ವಹಿಸುತ್ತಿಲ್ಲ.

ಎ) ಯಂತ್ರೋಪಕರಣಗಳನ್ನು ಮಾರಿದ್ದು ನಿಜವಾಗಿದೆ. ಮಾರಾಟ ಮಾಡಿದ ನಂತರ ರೂ. 20.00 ಲಕ್ಷ ಬ್ಯಾಂಕಿಗೆ ಸಂದಾಯ ಮಾಡಲಾಗಿರುತ್ತದೆ.

ಏ) ಸಾಲದ ಮೊತ್ತವನ್ನು ಮರುಪಾವತಿ ಮಾಡಲು ಮಾಲೀಕರು ಒಪ್ಪಿದ್ದರಿಂದ ಕ್ರಿಮಿನಲ್ ಪ್ರಕರಣ ದಾಖಲಿಸಿಲ್ಲ. ಈ ಘಟಕವು ಬೇನಾಮಿ ಘಟಕವಲ್ಲ. ಪ್ರಯುಕ್ತ ಕಾರಣರಾದ ಅಧಿಕಾರಿಗಳ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುವ ಅವಶ್ಯತೆ ಕಂಡು ಬರುತ್ತಿಲ್ಲ.

ಐ) ಒ.ಟಿ.ಎಸ್. ನಲ್ಲಿ ಮುಕ್ತಾಯಗೊಳಿಸಲು ಅವಕಾಶವಿದೆ.

ಒ) ಅನ್ವಯಿಸುವುದಿಲ್ಲ.

1222 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2008–09 ಮತ್ತು 2009–10ನೇ ಸಾಲಿನಲ್ಲಿ ಸಹಕಾರಿ ಇಲಾಖೆಗೆ ಸಂಬಂಧಪಟ್ಟಂತೆ ಯಾವ ಯಾವ ಯೋಜನೆಗಳನ್ನು ಪ್ರಕಟಿಸಲಾಗಿದೆ? ಈ ಯೋಜನೆಗಳ ಅನುಷ್ಠಾನಕ್ಕಾಗಿ ಸರ್ಕಾರಿ ಆದೇಶವನ್ನು ಎಂದು ಹೊರಡಿಸಲಾಗಿದೆ (ಯೋಜನೆಯ ಪೂರ್ಣ ವಿವರ ಒದಗಿಸುವುದು);

ಆ) ಕಳೆದ ಎರಡು ವರ್ಷಗಳಿಂದ ದಿನಾಂಕ 30–6–2009ರ ಅಂತ್ಯದವರೆಗೆ ಹೊಸ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರದಿಂದ ಬಿಡುಗಡೆ ಮಾಡಲಾದ ಹಣವೆಷ್ಟು; (ಜಿಲ್ಲಾವಾರು ವಿವರ ನೀಡುವುದು)

ಇ) ಈ ಯೋಜನೆಗಳ ಫಲವನ್ನು ರಾಜ್ಯದ ಶೇಕಡ ಎಷ್ಟು ಪ್ರಮಾಣದ ರೈತರು ಇದರ ಉಪಯೋಗ ಪಡೆದಿದ್ದಾರೆ;

ಈ) ಇದೇ ಅವಧಿಯಲ್ಲಿ, ಶೇಕಡ ಎಷ್ಟು ಗುರಿಯನ್ನು ಹೊಂದಲಾಗಿತ್ತು; ಇಲ್ಲಿಯವರೆವಿಗೆ ಎಷ್ಟು ಗುರಿಯನ್ನು ತಲುಪಲಾಗಿದೆ? ಎಷ್ಟು ಜನ ರೈತರಿಗೆ ಶೇಕರ 3ರ ಬಡ್ಡಿ ದರದಲ್ಲಿ ಸಾಲ ನೀಡಲಾಗಿದೆ; ಈ ರೀತಿ ನೀಡಲಾಗುವ ಸಾಲದ ಗರಿಷ್ಟ ಮೊತ್ತವೆಷ್ಟು; (ಜಿಲ್ಲಾವಾರು ಅಂಕಿ–ಅಂಶಗಳಲ್ಲಿ ಒದಗಿಸುವುದು)

ಉ) ಸರ್ಕಾರವು ಪ್ರಕಟಿಸಿರುವ ಯೋಜನೆಗಳ ಫಲ ಸಂಪೂರ್ಣವಾಗಿ ರೈತರನ್ನು ತಲುಪಿಸುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮವೇನು?